**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ದೊಡ್ಡಬಳ್ಳಾಪುರ**

**ಸಿ ಸಿ ನಂ :580/2023**

**ಪಿ ಡಬ್ಲ್ಯೂ - 5**

**ಸಿ ಡಬ್ಲ್ಯೂ - 5**

**ದಿಃ 16.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಗಂಗರಾಜು**

**ತಂದೆಯ ಹೆಸರು ಃ ಗಂಗಯ್ಯ**

**ವಯಸ್ಸು ಃ 68 ವರ್ಷ**

**ಉದ್ಯೋಗ ಃ ವ್ಯವಸಾಯ**

**ವಿಳಾಸ ಃ ಚೆನ್ನಾದೇವಿ ಅಗ್ರಹಾರ, ದೊಡ್ಡಬಳ್ಳಾಪುರ ತಾಲ್ಲೂಕು**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ಆರೋಪಿತರು ಗೊತ್ತು. ಚಾಸಾ-4 ಮತ್ತು 6 ರಿಂದ 9 ರವರು ಗೊತ್ತು. ಸುಮಾರು 4 ವರ್ಷಗಳ ಹಿಂದೆ ಸರ್ಕಾರಿ ಜಮೀನಿನಲ್ಲಿ ಪಂಚಾಯಿತಿಯವರು ಜೆ.ಸಿ.ಬಿ. ತಂದು ಗಿಡಕಂಟೆಗಳನ್ನು ತೆರವುಗೊಳಿಸುವ ಕೆಲಸ ಮಾಡುತ್ತಿದ್ದರು. ಆಗ ಆರೋಪಿತರು ಜಮೀನು ತಮ್ಮದೆಂದು ಸದರಿ ಕೆಲಸಕ್ಕೆ ಅಡ್ಡಿಪಡಿಸಿದರು. ಆಗ ಚಾಸಾ-1 ರವರು ಆರೋಪಿತರಿಗೆ ದಾಖಲೆಗಳನ್ನು ಕೇಳಿದರು. ಆರೋಪಿತರು ಯಾವುದೇ ದಾಖಲೆಗಳನ್ನು ಕೊಡಲಿಲ್ಲ. ಆಗ ಅಲ್ಲಿಗೆ ಬಂದ ಪೋಲೀಸರವರೊಂದಿಗೆ ಆರೋಪಿತರು ಗಲಾಟೆ ಮಾಡಿ 1 ನೇ ಆರೋಪಿಯು ಒಬ್ಬ ಮಹಿಳಾ ಪೋಲೀಸ್ ಮೇಲೆ ಕೈ ಮಾಡಿದರು. ಮಹಿಳಾ ಪೋಲೀಸಿನವರ ಹೆಸರು ನನಗೆ ಗೊತ್ತಿಲ್ಲ. ನಂತರ ಸದರಿ ಮಹಿಳಾ ಪೋಲೀಸ್‌ನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಸದರಿ ಜಾಗ ಸರ್ಕಾರಿ ಜಾಗವಾಗಿದ್ದರೂ ಆರೋಪಿತರು ಕೆಲಸಕ್ಕೆ ಅಡ್ಡಿಪಡಿಸಿ ಜಗಳ ಮಾಡಿದ್ದರು. ಸದರಿ ಜಾಗದ ಸಂಖ್ಯೆ ನನಗೆ ನೆನಪಿಲ್ಲ. ಈ ಕುರಿತು ನಾನು ಪೋಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರು 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. **(1 ನೇ ಆರೋಪಿಯು ಈ ದಿನ ಗೈರು ಹಾಜರಿದ್ದು, 1 ನೇ ಆರೋಪಿಯ ಗುರುತಿಸುವಿಕೆಯನ್ನು ವಕೀಲರು ಅಲ್ಲಗಳೆದಿರುವುದಿಲ್ಲ.)**

**(ಈ ಹಂತದಲ್ಲಿ ಸ ಸ ಅ ರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸ ಸ ಅ ರವರಿಂದ**

ದಿ.02.12.2022 ರಂದು ಬೆಳಿಗ್ಗೆ 10-50 ಗಂಟೆ ಸಮಯಕ್ಕೆ ಚಾಸಾ-1, 8 ರಿಂದ

16 ರವರು ಖಾನೇಷುಮಾರಿ ಸಂಖ್ಯೆ 98/46 ಬಿ ಸ್ವತ್ತಿನ ಹತ್ತಿರ ಬಂದಿದ್ದರು ಎಂದರೆ ಸರಿ. ಚಾಸಾ-1, 8 ರಿಂದ 16 ರವರ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿ ಆರೋಪಿತರು ಅವಾಚ್ಯಶಬ್ಧಗಳಿಂದ ಬೈದಿದ್ದರು ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಡಿ.ಎಂ.ಆರ್., ಆರೋಪಿತರ ಪರ ವಕೀಲರಿಂದ**

2022 ರಲ್ಲಿ ನಾನು ಊರಿನ ಗ್ರಾಮಪಂಚಾಯಿತಿಯ ಸದಸ್ಯನಾಗಿದ್ದೆ ಎಂದರೆ ಸರಿ. ಯಾವುದೇ ಸರ್ಕಾರಿ ಕೆಲಸಕ್ಕೆ ಜಮೀನು ಮಂಜೂರು ಮಾಡುವ ಪೂರ್ವದಲ್ಲಿ ಜಮೀನು ಯಾರಿಗೆ ಸೇರಿದ್ದು ಎಂದು ಪಂಚಾಯಿತಿ ಸಭೆಯಲ್ಲಿ ಪರಿಶೀಲಿಸಬೇಕಾಗುತ್ತದೆ ಎಂದರೆ ಸರಿ. ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಸದರಿ ಸ್ವತ್ತು ಯಾರಿಗೆ ಸಂಬಂಧಿಸಿದ್ದು ಎಂದು ಪರಿಶೀಲಿಸಿಲ್ಲ. ಸದರಿ ಸ್ವತ್ತಿನ ಸಂಬಂಧ ಯಾವುದಾದರೂ ದೂರು ದಾಖಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನಲ್ಲಿ ನಾವು ದೇವಸ್ಥಾನ ಕಟ್ಟಬೇಕೆಂದು ನಾವು ಪ್ರಯತ್ನಿಸಿದ್ದೆವು ಎಂದರೆ ಸರಿ. ಆಗ ಆರೋಪಿತರು ಸ್ವತ್ತು ತಮ್ಮದೆಂದು ದೇವಸ್ಥಾನ ಕಟ್ಟಬೇಡಿ ಎಂದು ಆಕ್ಷೇಪಿಸಿದ್ದರು ಎಂದರೆ ಸರಿ. ಸದರಿ ಸ್ವತ್ತನ್ನು ಆರೋಪಿತರಿಂದ ಬಿಡಿಸಿಕೊಂಡು ಬೇರೆ ಉದ್ದೇಶಕ್ಕಾಗಿ ಬಳಸಿಕೊಳ್ಳಲು ನಾವು ಪ್ರಯತ್ನಿಸಿದ್ದೆವು ಎಂದರೆ ಸರಿ. ಆರೋಪಿತರು ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಸಿವಿಲ್ ದಾವೆಯನ್ನು ಹಾಕಿದ್ದರು ಹಾಗೂ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಒಂದು ರಿಟ್ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ರಿಟ್ ಅರ್ಜಿಯಲ್ಲಿ ತಡೆಯಾಜ್ಞೆ ಇತ್ತು ಎಂದರೆ ಸರಿ. ಪೋಲೀಸರನ್ನು ಘಟನಾ ಸ್ಥಳಕ್ಕೆ ಯಾರು ಕರೆಸಿದ್ದರೆಂದು ಗೊತ್ತಿಲ್ಲ. ನಾನು ವಿವಾದಿತ ಘಟನಾ ದಿಃ 25.11.2022 ರ ನಂತರ ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ. ದಿಃ 03.12.2022 ರಂದು ಪೋಲೀಸರು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಹೇಳಿಕೆಯಲ್ಲಿನ ವಿಚಾರಗಳ ಬಗ್ಗೆಯೂ ನನಗೆ ಮಾಹಿತಿ ಇಲ್ಲ. ಚಾಸಾ-4, 6, 7 ಮತ್ತು ನಾನು ಸಂಬಂಧಿಕರು ಎಂದರೆ ಸರಿ. ಸ್ವತ್ತನ್ನು ಅಭಿವೃದ್ಧಿಪಡಿಸಬೇಕೆಂಬ ಉದ್ದೇಶದಿಂದ ಆರೋಪಿತರಿಂದ ಸ್ವತ್ತನ್ನು ಬಿಡಿಸಿಕೊಳ್ಳಲು ಪ್ರಯತ್ನಿಸಿದ್ದೆವು ಎಂದರೆ ಸರಿ. ಸ್ವತ್ತನ್ನು ಆರೋಪಿತರು ಬಿಟ್ಟುಕೊಡದ ಕಾರಣ ಈ ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿ. ಚಾಸಾ-1 ರವರು ನೀಡಿರುವ ದೂರಿನ ಬಗ್ಗೆ ನನಗೆ ಮಾಹಿತಿ ಇಲ್ಲ. ಘಟನಾ ಸ್ಥಳದಲ್ಲಿ ಸಾಕಷ್ಟು ಜನರು ಸೇರಿದ್ದರು ಎಂದರೆ ಸರಿ. ಅವರ ಹೆಸರುಗಳು ಹೇಳಲು ಗೊತ್ತಿಲ್ಲ. ಸದರಿ ದಿನ ನಾನಾಗಲೀ, ಇತರೆ ಪಂಚಾಯಿತಿ ಸದಸ್ಯರಾಗಲೀ ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ಜೆ.ಸಿ.ಬಿ. ಸಂಖ್ಯೆ ಗೊತ್ತಿಲ್ಲ. ಸದರಿ ದಿನ ಘಟನಾ ಸ್ಥಳಕ್ಕೆ ಇನ್‌ಸ್ಪೆಕ್ಟರ್ ಹಾಗೂ ಸರ್ಕಲ್ ಇನ್‌ಸ್ಪೆಕ್ಟರ್ ರವರು ಬಂದಿದ್ದರು ಅವರ ಹೆಸರುಗಳು ನನಗೆ ಗೊತ್ತಿಲ್ಲ. ಯಾವುದೇ ಘಟನೆಯಾಗದೇ ಇದ್ದರೂ ಹಾಗೂ ನಾನು ಘಟನಾ ಸ್ಥಳದಲ್ಲಿ ಇಲ್ಲದೇ ಇದ್ದರೂ ಆರೋಪಿತರು ನಮ್ಮ ವಿರುದ್ಧ ಪಕ್ಷದವರಾಗಿದ್ದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ಆರೋಪಿತರನ್ನು ಪೋಲೀಸರು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಲಿಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಆರೋಪಿತರ ವಿರುದ್ಧ ಎಲ್ಲರೂ ಸೇರಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ನಾನು ಹಾಗೂ ಆರೋಪಿತರು ಬೇರೆ ಬೇರೆ ಪಕ್ಷದ ಬೆಂಬಲಿಗರು. ಆರೋಪಿತರು ಯಾವುದೇ ಗಲಾಟೆ ಮಾಡದೇ ಇದ್ದರೂ ಹಾಗೂ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸದೇ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯ ಬೆರಳಚ್ಚುಗಾರರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**